ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 3, November-December, 2023, Pp. 107-112.
©*IIMRD*, Mysuru
IIMRD JOURNALS
www.iimrd.com

# ಕೃಷಿಕಾರ್ಮಿಕರ ಸ್ಥಿತಿಗತಿಗಳು : ಸಮಾಜಶಾಸ್ತ್ರೀಯ ವಿಶ್ಲೇಷಣೆ

**ನಾಗೇಂದ್ರ ಎನ್***

*ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

**ಸಾರಾಂಶ: (Abstract)**

*ನಮ್ಮ ದೇಶದ ಗ್ರಾಮೀಣ ಆರ್ಥಿಕತೆಯಲ್ಲಿ ಕೃಷಿಕಾರ್ಮಿಕರು ಅತ್ಯಂತ ನಿರ್ಲಕ್ಷಿತ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ಸಂಶೋಧನಾ ಅಧ್ಯಯನವು ಗ್ರಾಮೀಣ ಪ್ರದೇಶದ ಕೃಷಿ ಕಾರ್ಮಿಕರ ಮೇಲೆ ಪರಿಣಾಮ ಬೀರುವ ಸಾಮಾಜಿಕ–ಆರ್ಥಿಕ ಅಂಶಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದಾಗಿದೆ. ಭಾರತದ ವಿವಿಧ ಆರ್ಥಿಕ ವಲಯದಲ್ಲಿ ಕೃಷಿಯು ಪ್ರಮುಖವಾದ ಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿ ತೊಡಗಿರುವ ಕಾರ್ಮಿಕರ ಯೋಗಕ್ಷೇಮವು ಅತ್ಯಂತ ಮಹತ್ವದ್ದಾಗಿದೆ. ಈ ಸಂಶೋಧನೆಯು ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸವಾಲುಗಳನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ ಅವರ ಜೀವನ ಮಟ್ಟದ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಉದ್ದೇಶವನ್ನು ಹೊಂದಿದೆ.*

**ಮುಖ್ಯಪದಗಳು (Keywords):** ಕೃಷಿಕಾರ್ಮಿಕರು, ಗ್ರಾಮೀಣ ಜೀವನ, ಕೂಲಿ, ವ್ಯವಸಾಯ, ವೇತನ ತಾರತಮ್ಯ.

## ಪೀಠಿಕೆ

ಕೃಷಿ ಕಾರ್ಮಿಕರು ದೇಶದ ಆರ್ಥಿಕತೆ ಮತ್ತು ಜಾಗತಿಕ ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಭಾರತದ ಶೇಕಡ 60 ಕ್ಕೂ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರೆ. ಇವರಲ್ಲಿ ಬಹುತೇಕರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದಾರೆ ಹಾಗೂ ದೇಶದ ಒಟ್ಟು ಆದಾಯದಲ್ಲಿ ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳ ಪಾಲು ಹೆಚ್ಚಾರುವುದ್ದರಿಂದ ಕೃಷಿಯನ್ನು ನಮ್ಮ ದೇಶದ ಬೆನ್ನೆಲು ಎಂಬುದಾಗಿ ಕರೆಯಲಾಗಿದೆ ಹಾಗೂ ಕೃಷಿಯಲ್ಲಿ ಕೃಷಿಕಾರ್ಮಿಕರ ಪಾತ್ರ ಪ್ರಮುಖವಾದುದಾಗಿದೆ. ಸಾಮಾನ್ಯವಾಗಿ ಇತರರ ಕೃಷಿಭೂಮಿಯಲ್ಲಿ ಮಾಡುವ ಕೆಲಸಕ್ಕಾಗಿ ತಮ್ಮ ಬಹುಭಾಗದ ಆದಾಯವನ್ನು ವೇತನವಾಗಿ ಪಡೆಯುವ ಎಲ್ಲಾ ವ್ಯಕ್ತಿಗಳನ್ನು ಕೃಷಿಕಾರ್ಮಿಕರು ಎಂದು ಕರೆಯುತ್ತಾರೆ. ಇವರು ತಮ್ಮ ಜೀವನೋಪಾಯಕ್ಕಾಗಿ ಬೇರೆಯವರ ಭೂಮಿಯಲ್ಲಿ ಕೂಲಿಗಾಗಿ ದುಡಿಯುವ ಕಾರ್ಮಿಕರಾಗಿದ್ದು, ತಮ್ಮ ಕೂಲಿಯನ್ನು ನಗದು ರೂಪದಲ್ಲಿ ಪಡೆಯುತ್ತಾರೆ. ಕೃಷಿ ಕ್ಷೇತ್ರಕ್ಕೆ ಕಾರ್ಮಿಕರು ಅನಿವಾರ್ಯವಿದ್ದರೂ ಕೂಡ ಸಮಸ್ಯೆಗಳ ಸುಳಿಯಲ್ಲಿಯೇ ಜೀವನ ಸಾಗಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಸ್ವಾತಂತ್ರ್ಯ ಬಂದು ಹಲವಾರು ದಶಕಗಳೇ ಕಳೆದಿದ್ದರೂ ಇಂದಿಗೂ ಕೂಡ ಕೃಷಿಕಾರ್ಮಿಕರು ಹಲವಾರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಆರೋಗ್ಯ ಸಂಬಂಧಿ ಸಮ್ಮಸ್ಯೆಗಳಿಂದ ಬಳಲುತ್ತಿದ್ದಾರೆ. ಸರ್ಕಾರ

*Please cite this article as:* ನಾಗೇಂದ್ರ ಎನ್. (2023). ಕೃಷಿಕಾರ್ಮಿಕರ ಸ್ಥಿತಿಗತಿಗಳು : ಸಮಾಜಶಾಸ್ತ್ರೀಯ ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(3). ಪು.ಸಂ.* 107–112.

ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರೂ ಕೂಡ ಕೃಷಿಕಾರ್ಮಿಕರ ಸಮಸ್ಯೆಗಳ ಸ್ವರೂಪ ಬದಲಾಗಿದೆಯೇ ವಿನಃ ಸಮಸ್ಯೆಗಳು ಮಾತ್ರ ಬಗೆಹರಿದಿಲ್ಲ. ಅದರಲ್ಲೂ ಮಹಿಳಾ ಕೃಷಿಕಾರ್ಮಿಕರು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ನರಳುತ್ತಿರುವುದನ್ನು ನಾವು ಇಂದಿಗೂ ಕೂಡ ಕಾಣಬಹುದಾಗಿದೆ.

**ಸಾಹಿತ್ಯ ಅವಲೋಕನ**

ಕೃಷಿಕಾರ್ಮಿಕರ ಸಮಸ್ಯೆಗಳು, ಸವಾಲುಗಳು ಹಾಗೂ ಸಾಧ್ಯತೆಗಳನ್ನು ಕುರಿತು ಅನೇಕ ಸಮಾಜಶಾಸ್ತ್ರೀಯ ಅಧ್ಯಯನಗಳು ನಡೆದಿವೆ. ಅನೇಕ ಅಧ್ಯಯನಗಳು ಕೃಷಿ ಕಾರ್ಮಿಕರನ್ನು ಕುರಿತು ನೇರವಾಗಿ ಅಧ್ಯಯನ ನಡೆದಿದ್ದರೆ, ಕೆಲವು ಅಧ್ಯಯನಗಳಲ್ಲಿ ಕೃಷಿ ಕಾರ್ಮಿಕರು ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳು ಕುರಿತು ಉಲ್ಲೇಖಗಳಿವೆ. ಅಂತಹ ಅಧ್ಯಯನಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ನೀಡಲಾಗಿದೆ.

ಸ್ಕಾರ್ಲೆಟ್ ಎಫಿಸ್ಟೀನ್. (1962), ರವರು ಮಂಡ್ಯ ಜಿಲ್ಲೆಯ ಎರಡು ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಆ ಹಳ್ಳಿಗಳ ಆರ್ಥಿಕ ಸಂರಚನೆಯನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದ ಪ್ರಕಾರ 70% ರಷ್ಟು ಒಕ್ಕಲಿಗರು 80% ರಷ್ಟು ಭೂಮಿಯನ್ನು ಹೊಂದಿದ್ದು, 20% ಕ್ಕಿಂತ ಹೆಚ್ಚು ಆದಿಕರ್ನಾಟಕ ಸಮುದಾಯದವರು 10% ಕ್ಕಿಂತಲೂ ಕಡಮೆ ಭೂಮಿ ಹೊಂದಿ ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದು, ಅವರ ಬದುಕು ಇತರರಿಗಿಂತ ಕೆಳಮಟ್ಟದಲ್ಲಿದ್ದು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ಹಿಂದುಳಿದವರಾಗಿದ್ದಾರೆ ಎಂದು ಹೇಳಿದ್ದಾರೆ.

ಮದನ್. ಜಿ. ಆರ್. (1976), ರವರು ಕೂಲಿಕಾರರ ಸಾಮಾಜಿಕ ಪರಿಸರ, ಆರ್ಥಿಕ ಸ್ಥಿತಿ, ಉದ್ಯೋಗ, ದುಡಿತದ ರೀತಿ, ಕೆಲಸದ ಅವಧಿ, ತಿನ್ನುವ ಆಹಾರ ಮತ್ತು ಅದರ ಗುಣಮಟ್ಟ, ವಾಸಿಸುವ ಮನೆ, ಅದರ ಪರಿಸರ, ಕೂಲಿಕಾರರ ಸಾಮಾನ್ಯ ತಿಳುವಳಿಕೆ ಮೊದಲಾದ ಅಂಶಗಳು ಕೃಷಿಕೂಲಿಕಾರರನ್ನು ಕುಡಿತ ಮತ್ತು ದುಶ್ಚಟಗಳಿಗೆ ಪ್ರಚೋದನೆ ನೀಡುತ್ತದೆ. ಶೋಷಿತ ಸಮುದಾಯದ ಕೃಷಿ ಕಾರ್ಮಿಕರಲ್ಲಿ ಸರ್ವೇ ಸಾಮಾನ್ಯವಾಗಿ ಇದು ಕಂಡುಬರುತ್ತದೆ ಎಂದಿದ್ದಾರೆ.

ಅಶೋಕ್ ಕುಮಾರ್. ಯು. ಬಿ. (2001), ರವರು ಕೃಷಿ ಕ್ಷೇತ್ರದಲ್ಲಿ ಪುರುಷ ಮತ್ತು ಮಹಿಳೆ ಎಂಬ ಭೇದಭಾವವಿದ್ದು, ಮಹಿಳಾ ಕೃಷಿ ಕಾರ್ಮಿಕರು ತುಂಬಾ ಸಂಕಷ್ಟದಲ್ಲಿದ್ದಾರೆ. ಮಹಿಳೆಯು ಗೃಹ ಕೃತ್ಯದ ಜೊತೆಗೆ ಬಿತ್ತನೆ, ನಾಟಿ, ಕಳೆ, ಕೊಯ್ಲು ಮತ್ತು ಒಕ್ಕಣೆ ಮುಂತಾದ ಕೃಷಿ ಕೆಲಸಗಳಲ್ಲೂ ತೊಡಗುತ್ತಾರೆ. ಅಲ್ಲದೆ ಇವರ ದುಡಿಮೆಯ ಅವಧಿ, ವೇತನ ಮತ್ತು ಕೆಲಸದ ಸ್ವರೂಪ ಮುಂತಾದವು ಮಕ್ಕಳ ಮೇಲೆ ಪರಿಣಾಮ ಬೀರುತ್ತವೆ ಎಂದಿದ್ದಾರೆ ಮತ್ತು ಬಹುತೇಕ ಕೃಷಿಕಾರ್ಮಿಕರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, 90% ರಷ್ಟು ಕೂಲಿಕಾರರು ಭೂ ರಹಿತ ಕೃಷಿಕೂಲಿಕರಾಗಿದ್ದು, ಅನೇಕ ಸಮಸ್ಯೆಗಳು ಅವರನ್ನು ಸಾಲಗಾರನ್ನಾಗಿಸಿವೆ ಎಂಬುದಾಗಿ ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ. ಮೇಲಿನ ಅಂಶಗಳನ್ನು ಗಮನಿಸಿದಾಗ ಕೃಷಿ ಕಾರ್ಮಿಕರನ್ನೆ ಕೇಂದ್ರವಾಗಿಟ್ಟುಕೊಂಡು ನಡೆದಿರುವ ಅಧ್ಯಯನಗಳು ವಿರಳ ಎಂಬುದನ್ನು ಮನಗಾಣಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕೃಷಿಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ವಿವರಿಸಲಾಗಿದೆ. ಇವರಲ್ಲದೆ ಬೆಟೆಲ್ಲೆ

(1965) ಜಿ.ಎಸ್. ಘುರ್ಯೆ (1961), ಶ್ರೀನಿವಾಸ್. ಎಂ. ಎನ್. (1976), ಪ್ರಕಾಶ ರೆಡ್ಡಿ. ಜಿ. (1987), ಶೈಲಜ ಕೆ, (2016) ಮುಂತಾದವರು ಕೃಷಿ ಕಾರ್ಮಿಕರ ಕುರಿತು ಅಧ್ಯಯನ ಮಾಡಿದ್ದಾರೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಕೃಷಿ ಕಾರ್ಮಿಕರು ಕೃಷಿಗೆ ಅಗತ್ಯವಾಗಿರುವುದರ ಜೊತೆಗೆ ರಾಷ್ಟ್ರೀಯ ಆದಾಯಕ್ಕೆ ಅವರದೇ ಕೊಡುಗೆ ನೀಡುವ ಬಹು ಪ್ರಮುಖ ವರ್ಗವಾಗಿದೆ. ಆದರೂ ಇವರು ಇಂದಿಗೆ ಅನೇಕ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಎದುರಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಅಧ್ಯಯನದ ಉದ್ದೇಶಗಳು**

- ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು.
- ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ, ಅವಲೋಕನ, ಕುಟುಂಬ ಸಮೀಕ್ಷೆ, ಗುಂಪು ಚರ್ಚೆ, ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ವಿವಿಧ ಗ್ರಂಥಗಳು, ವರದಿಗಳು, ಲೇಖನಗಳು, ಸಂಶೋಧನಾ ಮಹಾಪ್ರಬಂಧಗಳು ಹಾಗೂ ಅಂತರ್ಜಾಲದ ಮೂಲಕ ಸಂಗ್ರಹಿಸಿಕೊಳ್ಳಲಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಮಾದರಿ ವಿಧಾನ**

ವಿವಿಧ ಭೌಗೋಳಿಕ ಪ್ರದೇಶ ಹಾಗೂ ಲಿಂಗ, ವಯೋಮಾನ, ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯ ಪ್ರಾತಿನಿಧಿಕ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳುವ ಸಲುವಾಗಿ ಶ್ರೇಣೀಕೃತ ಯಾದೃಚ್ಛಿಕ ಮಾದರಿ ತಂತ್ರವನ್ನು ಬಳಸಿ 100 ಪ್ರತಿಕ್ರಿಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಈ ಅಧ್ಯಯನವು ಕೆಲಸದ ಸಮಯ, ವೇತನ, ಶಿಕ್ಷಣದ ಮಟ್ಟ, ವಸತಿ ಪರಿಸ್ಥಿತಿಗಳು ಹಾಗೂ ಉದ್ಯೋಗ ತೃಪ್ತಿಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿದೆ. ಪ್ರಸ್ತುತ ಕೃಷಿಕಾರ್ಮಿಕರ ಬದುಕಿನ ಸ್ಥಿತಿಗತಿಗಳ ಬಗ್ಗೆ ವಿವರಣಾತ್ಮಕವಾಗಿ ತಿಳಿದುಕೊಳ್ಳುವ ಉದ್ದೇಶದಿಂದ ಗುಣಾತ್ಮಕ ಮಾಹಿತಿಗೆ ಹೆಚ್ಚು ಒತ್ತು ನೀಡಲಾಗಿದೆ.

**ವಿಷಯ ಮಂಡನೆ**

ಕೃಷಿಕಾಮಿಕರಲ್ಲಿ ಶೇ 70 ಕ್ಕೂ ಹೆಚ್ಚು ಕೃಷಿ ಕಾರ್ಮಿಕರು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರಾಗಿದ್ದು ವಿವಿಧ ರೀತಿಯ ಸಾಮಾಜಿಕ ಶೋಷಣೆಗಳಿಗೆ ಒಳಗಾಗಿದ್ದಾರೆ. ಭಾರತೀಯ

ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ಕೆಳಸ್ಥಾನದಲ್ಲಿರುವ ಸಮುದಾಗಳು ಮೇಲ್ವರ್ಗ ಮತ್ತು ಪ್ರಬಲ ಜಾತಿಗಳಾದ ಬ್ರಾಹ್ಮಣ, ಲಿಂಗಾಯಿತ, ಒಕ್ಕಲಿಗ ಸಮುದಾಯಕ್ಕೆ ಸೇರಿದ ಜಮೀನಿನಲ್ಲಿ ಕೂಲಿಮಾಡಿ ಜೀವನ ದೂಡುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ಮೇಲ್ವರ್ಗದವರೆಲ್ಲರೂ ಕೂಡ ಆರ್ಥಿಕವಾಗಿ ಮುಂದುವರೆದಿದ್ದಾರೆ ಎಂದರ್ಥವಲ್ಲ ಈ ಸಮುದಾಗಳಲ್ಲೂ ಕೂಡ ಕೂಲಿ ಮಾಡುವವರು ಕಂಡು ಬರುತ್ತಾರೆ ಆದರೆ ಇವರ ಪ್ರಮಾಣ ಕಡಿಮೆಯಿದೆ.

ಕೃಷಿ ಕಾರ್ಮಿಕರ ವಿದ್ಯಾರ್ಹತೆಯನ್ನು ಗಮನಿಸಿದಾಗ ಶೇ 70 ಕ್ಕೂ ಹೆಚ್ಚು ಮಂದಿ ಅನಕ್ಷರಸ್ಥರಾಗಿದ್ದಾರೆ. ಶಿಕ್ಷಣ ಪಡೆದವರಲ್ಲಿಯೂ ಕೂಡ ಬಹುತೇಕ ಮಂದಿ ಕೇವಲ ಪ್ರಾಥಮಿಕ ಶಿಕ್ಷಣವನ್ನು ಪಡೆದವರಾಗಿದ್ದು, ಬೆರಳೆಣಿಕೆ ಮಂದಿಯನ್ನು ಹೊರತು ಪಡಿಸಿದರೆ ಯಾರಿಗೂ ಕೂಡ ಓದಲು ಅಥವಾ ಬರೆಯಲು ಬರುವುದಿಲ್ಲ. ಆದ್ದರಿಂದ ಇವರಿಗೆ ಮತ್ತು ಕುಟುಂಬ ವರ್ಗದವರಿಗೆ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ಅರಿವಿಲ್ಲದಿರುವುದ್ದರಿಂದ ಹಲವಾರು ಸರ್ಕಾರಿ ಸವಲತ್ತುಗಳಿಂದ ವಂಚಿತರಾಗಿರುವುದು ಮತ್ತು ವಂಚಿತರಾಗುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿದೆ.

ಆದರೆ ಕೃಷಿ ಕಾರ್ಮಿಕರು ತಮ್ಮ ಮಕ್ಕಳ ಶಿಕ್ಷಣ ಕುರಿತಂತೆ 'ನಮ್ಮ ಮಕ್ಕಳು ನಮ್ಮಂತೆ ಕೂಲಿಗೆ ಹೋಗದೆ ಶಿಕ್ಷಣವಂತರಾಗಬೇಕು, ಸಮಾಜದಲ್ಲಿ ನಾಲ್ಕಕ್ಷರ ಕಲಿತು ಎಲ್ಲರಂತೆ ಬದುಕು ಕಟ್ಟಿಕೊಳ್ಳಬೇಕು ಅದಕ್ಕಾಗಿ ಎಷ್ಟೇ ಕಷ್ಟವಾದರೂ ಸರಿ ಸಹಿಸಿಕೊಳ್ಳುತ್ತೇವೆ' ಎನ್ನುತ್ತಾರೆ. ಅದರಂತೆ ಕೃಷಿ ಕಾರ್ಮಿಕರ ಕೆಲವು ಮಕ್ಕಳು ಪದವಿ ಮತ್ತು ಪದವಿ ಮೇಲ್ಪಟ್ಟ ಶಿಕ್ಷಣವನ್ನು ಪಡೆದುಕೊಂಡಿದ್ದಾರೆ. ಕುಟುಂಬ ನಿರ್ವಹಣೆ, ಪ್ರಾಣಿ ಸಾಕಾಣಿಕೆ, ಮಕ್ಕಳ ಲಾಲನೆ ಪೋಷಣೆ, ಮಕ್ಕಳಲ್ಲಿ ನಿರಾಸಕ್ತಿ, ಕಲಿಕಾ ಸಮಸ್ಯೆ ಮುಂತಾದ ಕಾರಣಗಳಿಂದ ಶಾಲಾ ಕಾಲೇಜು ತೊರೆದು ಪೋಷಕರಿಗೆ ನೆರವಾಗುತ್ತಿದಾರೆ. ಇನ್ನೂ ಆಶ್ಚರ್ಯಕರ ಸಂಗತಿಯೆಂದರೆ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದವರು ಕೂಡ ವಿದ್ಯೆಗೆ ತಕ್ಕ ಉದ್ಯೋಗವಿಲ್ಲದ ಕಾರಣ ಬೇರೆ ದಾರಿ ಕಾಣದೆ ಕೂಲಿಗಳಾಗಿ ದುಡಿಯುತ್ತಿದ್ದಾರೆ.

ಸಾಮಾನ್ಯವಾಗಿ ಸಂವಿಧಾನದ ಆಶಯದಂತೆ ಮತ್ತು ಸರ್ಕಾರದ ಪ್ರಯತ್ನದಿಂದಾಗಿ ಶೋಷಿತ ಮತ್ತು ಹಿಂದುಳಿದ ಸಮುದಾಯದಲ್ಲಿ ಶೈಕ್ಷಣಿಕ ಅರಿವು ಮೂಡಿರುವುದ್ದರಿಂದ ಹಾಗೂ ಪಟ್ಟಣ ಪ್ರದೇಶಗಳ ವಿಸ್ತರಣೆ ಹಾಗೂ ಕೈಗಾರಿಕೆಗಳ ಅಭಿವೃದ್ಧಿ ಮುಂತಾದ ಕಾರಣಗಳಿಂದಾಗಿ ಕೃಷಿ ಕಾರ್ಮಿಕರ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ತಗ್ಗಿದೆಯಾದ್ದರಿಂದ ಸಹಜವಾಗಿ ಕೃಷಿಕಾರ್ಮಿಕರಿಗೆ ಬೇಡಿಕೆಯಿದೆ. ಆದರೆ ಈ ಬೇಡಿಕೆ ವರುಷದ ಎಲ್ಲಾ ಕಾಲದಲ್ಲಿಯೂ ಕಂಡು ಬರುವುದಿಲ್ಲ ಬದಲಿಗೆ ಋತುಮಾನಗಳಿಗೆ ಅನುಗುಣವಾಗಿ ಕೇವಲ ಎರಡು ಮೂರು ತಿಂಗಳು ಮಾತ್ರ ಕಂಡು ಬರುತ್ತದೆ. ಇನ್ನುಳಿದ ಸಮಯದಲ್ಲಿ ಜೀವನ ನಿರ್ವಹಣೆಗಾಗಿ ಕೃಷಿ ಕಾರ್ಮಿಕ ಸಮುದಾಯಗಳು ತುಂಬಾ ಸಂಕಷ್ಟದಿಂದಿರುವುದು ಕಂಡು ಬಂದಿದೆ. ಈ ಕಾರಣಕ್ಕಾಗಿ ಕೆಲವರು ಕೃಷಿ ಸಂಬಂಧಿಸಿದ ಚಟುವಟಿಕೆಗಳಾದ ಹಸು, ಕುರಿ, ಕೋಳಿ, ಮೊಲ ಮುಂತಾದ ಪ್ರಾಣಿ ಪಕ್ಷಿಗಳನ್ನು ಸಾಕಿ ಜೀವನ ದೂಡುತ್ತಿದ್ದಾರೆ. ಇನ್ನುಳಿದವರು ಬಡ್ಡಿಗೆ ಸಾಲ ಪಡೆದು ಮಕ್ಕಳ ಶಿಕ್ಷಣ ಮತ್ತು ಕುಟುಂಬ ನಿರ್ವಹಣೆ ಮಾಡುತ್ತಾರೆ. ಕೆಲವರಂತೂ ಒಂದು ಸಾಲ ತೀರಿಸಲು ಮತ್ತೊಂದು ಸಾಲ, ಮತ್ತೊಂದು ಸಾಲ ತೀರಿಸಲು ಮಗದೊಂದು ಸಾಲ ಹೀಗೆ ಸಾಲದ ಮೇಲೆ ಸಾಲ ಮಾಡಿ ತೀರಿಸಲಾಗದೆ

ಊರುಕೇರಿ ಬಿಟ್ಟವರಿದ್ದಾರೆ. ಇಂತಹ ಸಂದರ್ಭದಲ್ಲಿ ಕುಟುಂಬದಲ್ಲಿ ಕಲಹ ಉಂಟಾಗಿ ವಿಘಟನೆಗಳುಂಟಾದ ಉದಾಹರಣಗೆಗಳು ಕೂಡ ಕಂಡು ಬಂದಿದೆ.

ಕೃಷಿ ಕಾರ್ಮಿಕರ ಭೂ ಹಿಡುವಳಿಯನ್ನು ಗಮನಿಸಿದಾಗ ಶೇ.40ಕ್ಕೂ ಹೆಚ್ಚು ಮಂದಿ ಭೂರಹಿತರಾಗಿದ್ದಾರೆ. ಶೇ.18 ಮಂದಿ ಅತಿಸಣ್ಣ ಮತ್ತು ಸಣ್ಣ ಹಿಡುವಳಿದಾರರಾಗಿದ್ದು, ಇನ್ನುಳಿದವರು ಮಧ್ಯಮ ಹಿಡುವಳಿಯನ್ನು ಹೊಂದಿದ್ದಾರೆ. ಅಂದರೆ ಭೂ ರಹಿತರು ಮತ್ತು ಕಡಿಮೆ ಹಿಡುವಳಿಯನ್ನು ಹೊಂದಿರುವವರು ಹೆಚ್ಚಿನ ಪ್ರಮಾಣದಲ್ಲಿ ಜೀವನ ನಿರ್ವಹಣೆಗಾಗಿ ಕೂಲಿಯನ್ನು ಅವಲಂಬಿಸಿಕೊಂಡಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಕೃಷಿ ಕಾರ್ಮಿಕರ ಕುಟುಂಬದ ಆದಾಯದ ಪ್ರಮಾಣವನ್ನು ಗಮನಿಸಿದಾಗ ಶೇ. 60ಕ್ಕೂ ಹೆಚ್ಚು ಕೃಷಿ ಕಾರ್ಮಿಕರ ವಾರ್ಷಿಕ ಆದಾಯ 30 ಸಾವಿರಕ್ಕಿಂತ ಕಡಿಮೆಯಿದೆ. ಇವರ ಆದಾಯ ಕಡಿಮೆಯಿರುವುದ್ದರಿಂದ ಜೀವನ ಮಟ್ಟ ಕೂಡ ಕಡಿಮೆ ಪ್ರಮಾಣದಲ್ಲಿದೆ.

ಕೃಷಿಕಾರ್ಮಿಕರ ಆರೋಗ್ಯ ಸ್ಥಿತಿಯನ್ನು ಅವಲೋಕಿಸಿದಾಗ ನಿಜಕ್ಕೂ ಶೋಚನಿಯವಾಗಿದೆ. ಏಕೆಂದರೆ ಹಿರಿಯ ವಯಸ್ಸಿನ ಮತ್ತು ಮಹಿಳಾ ಕೃಷಿ ಕಾರ್ಮಿಕರಲ್ಲಿ ನರಸಂಬಂಧಿತ, ಮೂಳೆ ಸಂಬಂಧಿಸಿದಂತೆ ಮತ್ತು ಚರ್ಮ ಸಂಬಂಧಿಸಿದಂತೆ ಕಾಯಿಲೆಗಳು ಸಾಮಾನ್ಯವಾಗಿರುವಂತೆ ಅಪೌಷ್ಟಿಕತೆಯು ಕೂಡ ಕಾಡುತ್ತಿದೆ. ಇವರು ಚಿಕಿತ್ಸೆಗಾಗಿ ಬಹುತೇಕ ಮಂದಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳನ್ನು ಅವಲಂಬಿಸಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾಗಿ ಚಿಕಿತ್ಸೆ ನೀಡುವುದಿಲ್ಲ ಹಾಗೂ ಹಣ ನೀಡದಿದ್ದರೆ ಕಾಯಿಲೆ ಗುಣವಾಗುವುದಿಲ್ಲ ಎಂಬ ಮನೋಭಾದಿಂದ ಖಾಸಗಿ ಕ್ಲಿನಿಕ್‌ಗಳಲ್ಲಿ ಚಿಕೆತ್ಸೆ ಪಡೆದುಕೊಳ್ಳುತ್ತಾರೆ. ಅವರ ಕೂಲಿಯಲ್ಲಿ ಸರಾಸರಿ ಶೇ 20 ಕ್ಕೂ ಅಧಿಕ ಹಣವನ್ನು ಚಿಕಿತ್ಸೆಗಾಗಿ ವೆಚ್ಚ ಮಾಡುವುದು ಕಂಡು ಬಂದಿದೆ. ಪಟ್ಟಣಗಳಿಂದ ದೂರದಲ್ಲಿರುವ ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಕಾರ್ಮಿಕರು ಗಿಡಮೂಲಿಕೆ ಚಿಕತ್ಸೆಯನ್ನು ಅವಲಂಬಿರುವುದು ಕಂಡು ಬಂದಿದೆ.

ಸರ್ಕಾರದಿಂದ ಈ ಸಮುದಾಯದವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳ ಅಭಿವೃದ್ಧಿಯ ಬಗ್ಗೆ ಯಾವುದೇ ಅರಿವು ಇರದಿರುವುದು ಸಂಶೋಧನೆಯಲ್ಲಿ ವ್ಯಕ್ತವಾಗಿದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಕೃಷಿ ಕಾರ್ಮಿಕರು ಸಮಾಜದಲ್ಲಿ ಇಂದಿಗೂ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಶೋಷಿತ ವರ್ಗಕ್ಕೆ ಸೇರಿದವರಾಗಿದ್ದಾರೆ. ಕೃಷಿ ಭೂಮಿಗೆ ಅನುಸಾರವಾಗಿ ಕೃಷಿ ಕಾರ್ಮಿಕರ ಆರ್ಥಿಕ ಅಭಿವೃದ್ಧಿ ಯೋಜನೆಗಳು ರೂಪುಗೊಳ್ಳಬೇಕೆದೆ. ಕೃಷಿ ಕಾರ್ಮಿಕ ಸಮುದಾಯಕ್ಕೆ ಪ್ರತ್ಯೇಕ ಸೌಲಭ್ಯಗಳು ರೂಪುಗೊಂಡಾಗ ಮಾತ್ರ ಕೃಷಿಕೂಲಿ ಕಾರ್ಮಿಕರ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳನ್ನು ರೂಪಿಸುವವರು ಮತ್ತು ಚಿಂತನಾಶೀಲರು ಯೋಚಿಸಬೇಕಾದುದ್ದು ಸಹ ಅತ್ಯವಶ್ಯಕವಾಗಿದೆ. ಕೂಲಿಕಾರರ ದುಡಿಮೆಗೆ ಸಂಬಂಧಿಸಿದಂತೆ ಕೆಲವೊಂದು ನಿರ್ಧಿಷ್ಟ ಹಾಗೂ ನ್ಯಾಯ ಸಮ್ಮತವಾದ ನಿಯಮಗಳನ್ನು ಕಡ್ಡಾಯವಾಗಿ ಜಾರಿಗೆ ತರುವ ಅವಶ್ಯಕತೆಯಿದೆ. ಇದೇ ಅಂಶವನ್ನು ಅರ್ಜುನ್ ಸೇನ್ ಗುಪ್ತಾ (2008) ರವರು ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲದೇ ವಾರದ ಏಳು ದಿನಗಳಲ್ಲಿ 6 ದಿನಗಳು 8 ಗಂಟೆಯ ಕೆಲಸ,

ನಡುವೆ ವಿರಾಮ. ವೇತನದ ಸಮೇತ ಒಂದು ದಿನದ ವಿಶ್ರಾಂತಿ, ರಾಷ್ಟ್ರೀಯ ಕನಿಷ್ಟ ವೇತನ, ಪುರುಷರು ಮತ್ತು ಮಹಿಳೆಯರ ನಡುವೆ ಲಿಂಗ, ಜಾತಿ ಅಥವಾ ಕೋಮಿನ ಆಧಾರದ ಮೇಲೆ ಯಾವ ತಾರತಮ್ಯವನ್ನು ಮಾಡದಂತೆ ಸಮಾನತೆ ರೂಪಿಸುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅರ್ಜುನ್ ಸೇನ್ ಗುಪ್ತಾ ವರದಿ. (2008). ಅಸಂಘಟಿತ ವಲಯದ ದುಡಿಮೆಗಾರರ ಕೂಲಿ ಮತ್ತು ಆದಾಯ. *ಹೊಸತು,* ಏಪ್ರಿಲ್ ಸಂಚಿಕೆ, ನವಕರ್ನಾಟಕ ಪ್ರಕಾಶನ.
- ಅಶೋಕ್‌ಕುಮಾರ್. ಯು. ಬಿ. (2001*). ಕೃಷಿ ಕೂಲಿಕಾರರ ಬದುಕು: ಬವಣೆ.* ಚೇತನ ಬುಕ್ ಹೌಸ್.
- ಶೈಲಜ ಕೆ. (2016). ಪರಿಶಿಷ್ಟ ಜಾತಿ ಮಹಿಳಾ ಕೃಷಿಕಾರ್ಮಿಕರ ಸ್ಥಿತಿಗತಿಗಳು : ಒಂದು ಮಾನವಶಾಸ್ತ್ರೀಯ ಅಧ್ಯಯನ. ಅಪ್ರಕಟಿತ ಪ್ರೌಢ ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ.
- Bansil. P. C. (1977). *Agricultural problems of India*. Oxford and IBH Publishing Co.
- Beteille, Andre. (1965). *Caste, class and changing patterns of stratification in a Tanjavar village.* University of California.
- Epstein. Scarlet. T. (1962). *Economic development and social change in south India.* Manchester University press.
- Gurya. G. S. (1961). *Caste class and occupation.* Popular book depot,
- Madan. G. R. (1976). *Indian social problems-Vo1-1,* Allied Publisher.
- Srinivas. M. N. (1976). *The Remembered village.* Oxford University press.